

بسم اللهِ الرّحمٰن الرّحيم

# ದೀನ್‌ಗೆ ಸಂಬಂಧಪಟ್ಟ ಕೆಲಸಗಳನ್ನು ನಾನೇ ಮಾಡಬೇಕಾಗಿದೆ ಎಂಬ ದೃಢ ಪ್ರತಿಜ್ಞೆಯೊಂದಿಗೆ ಮುಂದೆ ಸಾಗಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ22-05-2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನಿನ ವಚನ ತಿಲಾವತ್ ಮಾಡಿದರು:*

يَا أَيُّهَا الَّذِينَ آمَنُوا اجْتَنِبُوا كَثِيرًا مِنَ الظَّنِّ إِنَّ بَعْضَ الظَّنِّ إِثْمٌ

*ಯಾ ಅಯ್ಯುಹಲ್ಲಝೀನ ಆಮನುಜ್‌ತನಿಬೂ ಕಸೀರನ್ ಮಿನಝ್ಝನ್ನಿ, ಇನ್ನ ಬಅ್‌ಝು ಝ್ಝನ್ನಿ ಇಸ್‌ಮುನ್.*

"ಎಲೈ ವಿಶ್ವಾಸಿಗಳೇ, ಮಿತಿಮೀರಿ ಸಂಶಯಪಡುವುದರಿಂದ ನೀವು ದೂರವಿರಿ. ನಿಶ್ಚಯವಾಗಿಯೂ ಕೆಲವು ಸಂಶಯಗಳು ಪಾಪಕರವಾಗಿವೆ." (ಪವಿತ್ರ ಖುರ್‌ಆನ್ 49: 13)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸ್ಥಳದಲ್ಲಿ ಇದರ ಬಗ್ಗೆ ಈ ರೀತಿ ಹೇಳಿರುವರು: "ಮನುಷ್ಯನು ಕೆಟ್ಟ ಸಂಶಯಗಳನ್ನು ಹೊಂದುವಾಗ ಕೆಡುಕುಗಳು ಉಂಟಾಗುತ್ತವೆ. ಒಳ್ಳೆಯ ಯೋಚನೆ ಹೊಂದುವುದಾದರೆ ಏನಾದರೂ ಕೊಡುವ ಭಾಗ್ಯ ಲಭಿಸುತ್ತದೆ. ಆದರೆ, ಪ್ರಥಮ ಹೆಜ್ಜೆಯೇ ತಪ್ಪಾಗಿದ್ದರೆ ಉದ್ದೇಶಿತ ಗುರಿ ತಲಪುವುದು ಅಸಾಧ್ಯವಾಗುತ್ತದೆ. ಕೆಟ್ಟ ಸಂಶಯ ಹೊಂದುವುದು ಬಹಳ ಕೆಟ್ಟದಾಗಿದೆ. ಅದು ಮನುಷ್ಯನನ್ನು ಅನೇಕ ಒಳಿತುಗಳಿಂದ ವಂಚಿತನನ್ನಾಗಿ ಮಾಡುತ್ತದೆ. ಅಂತಹ ವ್ಯಕ್ತಿ ಸಂಶಯ ಪಡುತ್ತಾ ಕೊನೆಗೆ ದೇವನ ಬಗ್ಗೆ ಸಹ ಕೆಟ್ಟ ಸಂಶಯ ಹೊಂದುತ್ತಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ಮನುಷ್ಯನ ಹೃದಯದ ಒಳಗೆ ತನಕ ನಾವು ತಲಪಲಾರೆವು. ಹೃದಯದ ಬಗ್ಗೆ ತಪ್ಪಾಗಿ ಹೇಳುವುದು ಪಾಪವಾಗಿದೆ. ಒಬ್ಬ ಮನುಷ್ಯ ಇನ್ನೊಬ್ಬನನ್ನು ಕೆಟ್ಟವನೆಂದು ಯೋಚಿಸಿದರೆ ಹಾಗೆ ಯೋಚಿಸುವವನು ಅವನಿಗಿಂತ ಕೆಟ್ಟವನಾಗುತ್ತಾನೆ. ಅವಸರಪಟ್ಟು ಕೆಟ್ಟ ಸಂಶಯಮಾಡಬಾರದು ಅದು ಒಳ್ಳೆಯದಲ್ಲ. ನಮಗೆ ಜನರ ಹೃದಯಗಳ ಬಗ್ಗೆ ತಿಳಿದಿದೆ ಎಂದು ಹೇಳುವುದು ಬಹಳ ಸೂಕ್ಷ್ಮ ವಿಚಾರವಾಗಿದೆ. ಇದು ಬಹಳ ಸೂಕ್ಷ್ಮ ಸಂಗತಿಯಾಗಿರುವುದು ಏಕೆಂದರೆ ಅದು ಅನೇಕ ಜನಾಂಗಗಳನ್ನು ನಾಶಗೊಳಿಸಿದೆ. ಆ ಜನಾಂಗಗಳು ಪ್ರವಾದಿಗಳ ಬಗ್ಗೆ ಮತ್ತು ಅವರ ಕುಟುಂಬದ ಬಗ್ಗೆ ಕೆಟ್ಟ ಸಂಶಯ ಹೊಂದಿದರು. ಮೊದಲು ಹೇಳಿದ ಹಾಗೆ, ಅಂತಹ ಜನರು ಕೊನೆಗೆ ಅಲ್ಲಾಹನ ಬಗ್ಗೆ ಸಹ ಸಂಶಯ ಹೊಂದುತ್ತಾರೆ."

ಇಂತಹ ಕೆಟ್ಟ ಸಂಶಯ ಹೊಂದುವವರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುತ್ತಾ ಹೀಗೆ ಹೇಳಿದರು: "ಜನರು ಪ್ರವಾದಿಗಳ ಬಗ್ಗೆ ಮತ್ತು ಅವರ ಕುಟುಂಬದ ಬಗ್ಗೆ ಸಹ ಕೆಟ್ಟ ಸಂಶಯ ಹೊಂದಿದರು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ." ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಿಗೆ ತಮ್ಮ ಕಾಲಘಟ್ಟದಲ್ಲಿ ಇದನ್ನು ಎಲ್ಲರಿಗಿಂತ ಹೆಚ್ಚು ಎದುರಿಸಬೇಕಾಗಿ ಬಂತು. ಒಂದು ಸ್ಥಳದಲ್ಲಿ ಅವರು ಹೀಗೆ ಹೇಳುತ್ತಾರೆ: "ಅಲ್ಲಾಹನು ನನ್ನನ್ನು ಖಲೀಫನನ್ನಾಗಿ ಮಾಡಿದನು. ಅವನು ನನಗೆ ಯಾವಾಗಲೂ ಸಹಾಯ ಒದಗಿಸಿದನು. ಅಲ್ಲಾಹನು ಯಾವಾಗಲೂ ನನ್ನ ನೆರವಿಗೋಸ್ಕರ ಆಕಾಶದಿಂದ ದೇವದೂತರನ್ನು ಇಳಿಸಿದನು ಎಂಬುದನ್ನು ಜನ್ಮತಃ ಅಂಧನಾದವನ ಹೊರತು ಬೇರಾರಿಗೂ ಅಲ್ಲಗಳೆಯಲು ಸಾಧ್ಯವಿಲ್ಲ. ನೀವು ಈಗ ಬೇಕಾದರೂ ನನ್ನ ಮೇಲೆ ದೋಷಾರೋಪ ಹೊರಿಸಿರಿ; ಅದರ ಪರಿಣಾಮ ಏನಾಗುವುದೆಂದು ನೋಡುವಿರಿ. ಈ ರೀತಿಯ ಆಕ್ಷೇಪಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಸಹ ಮಾಡಲಾಗಿತ್ತು. 'ಚಂದ'ದ ಬಗ್ಗೆ ಆಕ್ಷೇಪ ಮಾಡಿದವರೊಡನೆ ಅವರು ಹೇಳಿದರು: ನೀವು ಇನ್ನು ಮುಂದೆ ಜಮಾಅತಿಗೋಸ್ಕರ ಒಂದು ಕವಡೆ ಕಾಸು ಸಹ ಕಳುಹಿಸುವುದು ನಿಮಗೆ ನಿಷಿದ್ಧವಾಗಿರುತ್ತದೆ. ಅನಂತರ ನೀವು ನೋಡಿರಿ ಅಲ್ಲಾಹನ ಜಮಾಅತಿಗೆ ಏನು ಹಾನಿ ಉಂಟಾಗಲು ಸಾಧ್ಯವೆಂದು. ನಾನು ಸಹ ಅಂತಹ ಜನರೊಂದಿಗೆ, ಅಂದರೆ ಚಂದಾದ ಹಣವನ್ನು ತಪ್ಪಾದ ರೀತಿಯಲ್ಲಿ ಖರ್ಚು ಮಾಡಲಾಗುತ್ತದೆ ಎಂದು ಆಕ್ಷೇಪಿಸುವವರೊಡನೆ ಹೇಳಲು ಬಯಸುತ್ತೇನೆ- ನೀವು ಇನ್ನು ಮುಂದೆ ಜಮಾಅತಿಗೋಸ್ಕರ ಒಂದು ಪೈಸೆ ಸಹ ಕೊಡುವುದು ನಿಮಗೆ ನಿಷಿದ್ಧವಾಗಿದೆ ಎಂದು. ಕಟು ಶಬ್ದವನ್ನು ಬಳಸುವುದು ನನ್ನ ಸ್ವಭಾವವಲ್ಲ. ಆದರೆ ನಾನು ಹೇಳುತ್ತೇನೆ: ನಿಮ್ಮಲ್ಲಿ ಸಭ್ಯತೆ ಸ್ವಲ್ಪವಾದರೂ ಬಾಕಿ ಉಳಿದಿದ್ದರೆ ನೀವು ಇನ್ನು ಮುಂದೆ ಜಮಾಅತಿಗೋಸ್ಕರ ಒಂದು ಪೈಸೆಯನ್ನೂ ಕೊಡಬೇಡಿರಿ. ಆ ಮೇಲೆ ನೋಡಿರಿ ಜಮಾಅತಿನ ಕೆಲಸ ನಡೆಯುತ್ತದೆಯೇ ಇಲ್ಲವೇ ಎಂದು. ಅಲ್ಲಾಹನು ಅದೃಶ್ಯವಾಗಿ ನನಗೆ ಸಹಾಯ ಒದಗಿಸುವನು. ಅವನು ನಿಷ್ಠಾವಂತರಿಗೆ ಸಂದೇಶವಾಣಿ ಅವತೀರ್ಣ ಗೊಳಿಸುವನು. ಅವರು ಜಮಾಅತಿಗೋಸ್ಕರ ತಮ್ಮ ಹಣವನ್ನು ಬಲಿಯರ್ಪಿಸುವುದು ಅಭಿಮಾನಕರವೆಂದು ಗಣಿಸುವರು. ನನಗೆ ಚೆನ್ನಾಗಿ ನೆನಪಿದೆ, ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ತೋಟಕ್ಕೆ ಹೋದಾಗ ಹೇಳಿದರು- ನನಗೆ ಇಲ್ಲಿ ಬೆಳ್ಳಿಯಿಂದ ನಿರ್ಮಿತವಾದ ಗೋರಿಗಳು ತೋರಿಸಲ್ಪಟ್ಟವು. ಒಬ್ಬ ದೇವದೂತ ಹೇಳಿದರು: ಇವು ನಿನ್ನ ಮತ್ತು ನಿನ್ನ ಕುಟುಂಬದವರ ಗೋರಿಗಳಾಗಿವೆ ಎಂದು. ಆ ಕಾರಣದಿಂದ ತೋಟದ ಆ ಭಾಗವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಕುಟುಂಬದವರ ಗೋರಿಗಳಿಗೋಸ್ಕರ ಮೀಸಲಾಗಿ ಇಡಲಾಗಿದೆ. ಅಲ್ಲಾಹನು ನಮ್ಮ ಗೋರಿಗಳನ್ನು ಸಹ ಬೆಳ್ಳಿಯನ್ನಾಗಿ ಮಾಡಿದ್ದಾನೆ. ಆಕ್ಷೇಪ ಎತ್ತುವವರು ಹೇಳುತ್ತಾರೆ- ಇವರು ಜನರ ಹಣವನ್ನು

ತಿನ್ನುತ್ತಿದ್ದಾರೆಂದು. ಆದರೆ, ಇವರ ಮರಣದ ನಂತರವೂ ಜನರಿಗೆ ಇವರಿಂದ ಅನುಗ್ರಹ ಲಭಿಸುವುದೆಂದು ಅಲ್ಲಾಹನು ಹೇಳುತ್ತಿದ್ದಾನೆ. ಅಲ್ಲಾಹನು ನಮ್ಮ ಮಣ್ಣನ್ನು ಬೆಳ್ಳಿಯನ್ನಾಗಿ ಮಾಡಿದ್ದಾನೆ. ಆದರೆ ನೀವು ಆಕ್ಷೇಪ ಮಾಡುತ್ತಾ ನಿಮ್ಮ ಬೆಳ್ಳಿಯನ್ನು ಮಣ್ಣು ಮಾಡುತ್ತಿದ್ದೀರಿ.''

ಇಂತಹ ಜನರು ಎಲ್ಲ ಕಾಲಗಳಲ್ಲೂ ಇರುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಸಹ ಇಂತಹ ಜನರು ಆಕ್ಷೇಪ ಮಾಡಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ನಮ್ಮಿಂದ ಬೇರೆಯಾಗಿ ಹೋದವರಲ್ಲಿ ತಮ್ಮ ಸಹೋದರನ ಬಗ್ಗೆ ಕೆಟ್ಟ ಸಂಶಯಗಳು ಇದ್ದುವು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಸಹ, ಅವರು ಜಮಾಅತಿನ ಹಣವನ್ನು ತಮ್ಮ ಸ್ವಂತ ಆವಶ್ಯಕತೆಗಳಿಗೆ ಖರ್ಚು ಮಾಡುತ್ತಾರೆ ಎಂದು ಹೇಳಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಈ ವಿಷಯ ಅವರ ಜೀವಿತದ ಕೊನೆಯ ಕಾಲದಲ್ಲಿ ತಿಳಿಯಿತು. ಅವರು ನನ್ನೊಂದಿಗೆ ಹೇಳಿದರು: ಲಂಗರ್‌ಖಾನ ಚಲಾಯಿಸಲು ದೇಣಿಗೆಯಾಗಿ ನೀಡಲ್ಪಡುವ ಹಣ ನನ್ನ ಸ್ವಂತಕ್ಕಾಗಿ ಖರ್ಚು ಮಾಡುತ್ತೇನೆ ಎಂದು ಕೆಲವರು ಹೇಳುತ್ತಾರೆ. ಆದರೆ ಜನರು ನನಗೆ ಕಾಣಿಕೆಯಾಗಿ ನೀಡುವ ಹಣ, ಎಂದರೆ ನಾನು ನನ್ನ ಸ್ವಂತಕ್ಕಾಗಿ ವಿನಿಯೋಗಿಸಬೇಕೆಂದು ನನಗೆ ನೀಡಲಾಗುವ ಹಣದಿಂದ ಸಹ ನಾನು ಲಂಗರ್‌ಖಾನ ಚಲಾಯಿಸಲು ಹಣ ನೀಡುತ್ತೇನೆ ಎಂದು.''

ನಮ್ಮ ಜಮಾಅತಿಗೆ ಈಗ ಉಂಟಾಗಿರುವ ಸಾಂಪತ್ತಿಕ ಸಮೃದ್ಧಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಯ ಫಲವಾಗಿದೆ. ಇದು ಯಾರದಾದರೂ ವ್ಯಯಕ್ತಿಕ ಪ್ರಯತ್ನದ ಫಲವಲ್ಲ. ಈಗ ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಂಗರ್‌ಖಾನ ಲೋಕದ ಪ್ರತಿಯೊಂದು ದೇಶದಲ್ಲೂ ಜಾರಿಯಾಗಿದೆ.

''ಅಲ್ಲಾಹನು ತನ್ನ ಪ್ರವಾದಿಯನ್ನು ಲೋಕಕ್ಕೆ ಕಳುಹಿಸುವುದು ಏಕೆಂದರೆ ಲೋಕದಲ್ಲಿ ಆಧ್ಯಾತ್ಮಿಕ ಅಧಃಪತನ ಪ್ರಾರಂಭವಾಗಿರುತ್ತದೆ ಆದುದರಿಂದ ಜನರಲ್ಲಿ ಆಧ್ಯಾತ್ಮಿಕವಾಗಿ ಉಂಟಾದ ಅವನತಿಯನ್ನು ಸುಧಾರಣೆ ಮಾಡಲಿಕ್ಕೋಸ್ಕರ ಪ್ರವಾದಿಯನ್ನು ಕಳುಹಿಸಲಾಗುತ್ತಿದೆ. ಪ್ರವಾದಿಗಳನ್ನು ನಂಬುವವರ ಸಂಖ್ಯೆ ವರ್ಧಿಸುವಾಗ ಅವರ ಆಧ್ಯಾತ್ಮಿಕ ಅಭಿವೃದ್ಧಿಯೊಂದಿಗೆ ಲೌಕಿಕ ಅಭಿವೃದ್ಧಿಯೂ ವರ್ಧಿಸುತ್ತದೆ. ಮಾತ್ರವಲ್ಲ ಪ್ರವಾದಿ ಮೃತರಾದ ನಂತರ ಲೌಕಿಕ ಅಭಿವೃದ್ಧಿ ಬಹಳ ಹೆಚ್ಚಾಗುತ್ತದೆ. ಆದರೆ ಪ್ರವಾದಿಯ ಕಾಲದಲ್ಲಿ ಉಂಟಾದ ಆಧ್ಯಾತ್ಮಿಕ ಉನ್ನತ ಮಟ್ಟ ಅನಂತರದ ಕಾಲದಲ್ಲಿ ಇರುವುದಿಲ್ಲ. ಪ್ರವಾದಿಯು ಮೃತನಾದ ಕೂಡಲೆ ಆಧ್ಯಾತ್ಮಿಕವಾಗಿ ರಾತ್ರಿಯ ಕಾಲ ಪ್ರಾರಂಭವಾಗುತ್ತದೆ. ಆದರೆ ಲೌಕಿಕವಾಗಿ ಪ್ರವಾದಿಯ ಮೃತ್ಯು ಮುಂಜಾನೆಯನ್ನು ಸೂಚಿಸುತ್ತದೆ. ಅನಂತರ ಸೂರ್ಯೋದಯವಾಗುತ್ತದೆ. ಎಂದರೆ ಬಾಹ್ಯವಾದ ಸಂವೃದ್ಧಿಯ ದೃಶ್ಯಗಳು ಕಾಣಿಸುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿಯೂ ಹೀಗೆಯೇ ಸಂಭವಿಸಿತು. ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮರ ಕಾಲದಲ್ಲಿ ಸಹ ಹೀಗೆಯೇ ಸಂಭವಿಸಿದೆ. ಹೀಗೆಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಸಹ ಸಂಭವಿಸಿತು. ಒಂದು ದಿನ ಅವರು ನಮ್ಮ ತಾಯಿಯವರೊಂದಿಗೆ ಹೇಳಿದರು– ಈಗ ಹಣ ದೊರಕುವ ಮಾರ್ಗ ಯಾವುದೂ ಕಾಣಿಸುವುದಿಲ್ಲ. ಬಹಳಷ್ಟು ಖರ್ಚು ಇದೆ. ಯಾರಿಂದಾದರೂ ಸಾಲ ಪಡೆಯಬೇಕೆಂದು ನಾನು ಯೋಚಿಸುತ್ತಿದ್ದೇನೆ – ಎಂದು. ಹಾಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಝುಹರ್ ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಹೋದರು. ಅವರು ಹಿಂದಿರುಗಿ ಬರುವಾಗ ಮುಗುಳ್ನಗುತ್ತಾ ನಮ್ಮ ತಾಯಿಯವರೊಂದಿಗೆ ಹೇಳಿದರು– ಮನುಷ್ಯನು ಅಲ್ಲಾಹನಿಂದ ನಿರಂತರ ದೃಷ್ಟಾಂತಗಳನ್ನು ಕಾಣುತ್ತಾ ಇದ್ದರೂ ಕೆಲವು ಸಾರಿ ಸಂಶಯಗ್ರಸ್ತನಾಗುತ್ತಾನೆ. ನಾನು ಯೋಚಿಸಿದೆ ಲಂಗರ್‌ಖಾನ ಚಲಾಯಿಸಲು ಹಣವಿಲ್ಲವೆಂದು. ಎಲ್ಲಿಂದಾದರೂ ಸಾಲ ಪಡೆಯಬೇಕಾದೀತು ಎಂದು ಯೋಚಿಸಿದೆ. ಆದರೆ ನಾನು ಮಸ್‌ಜಿದ್‌ಗೆ ಹೋದಾಗ ಒಬ್ಬ ಮಲೀನ ವಸ್ತ್ರಧಾರಿ ನನ್ನ ಮುಂದೆ ಬಂದು ಹಣದ ಒಂದು ಚೀಲ ನೀಡಿದನು. ಅವನ ಸ್ಥಿತಿಯನ್ನು ನೋಡಿ ನಾನು ಅದರಲ್ಲಿ ಕೆಲವು ನಾಣ್ಯಗಳು ಮಾತ್ರ ಇರಬಹುದೆಂದು ಯೋಚಿಸಿದೆ. ಆ ಚೀಲ ಭಾರವಾಗಿತ್ತು. ನಾನು ಮನೆಗೆ ಬಂದು ಆ ಚೀಲ ತೆರೆದು ನೋಡಿದಾಗ ಅದರಲ್ಲಿ ಅನೇಕ ನೂರು ರೂಪಾಯಿಗಳಿದ್ದುವು ಎಂದು ಹೇಳಿದರು.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಇದ್ದ ಪ್ರೇಮವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರಿಗೆ ಅವರ ಬಗ್ಗೆ ಇದ್ದ ಪ್ರೇಮವನ್ನು ಆ ಕಾಲದ ನಂತರದ ಜನರು ಮನವರಿಕೆ ಮಾಡಿಕೊಳ್ಳಲಾರರು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಚಿಕ್ಕ ಪ್ರಾಯದವರಾಗಿದ್ದು ಸಾಕಷ್ಟು ಪ್ರಜ್ಞೆ ಲಭಿಸದವರೂ ಅದನ್ನು ಅರ್ಥಮಾಡಿಕೊಳ್ಳಲಾರರು. ಆದರೆ ಅಲ್ಲಾಹನು ನನಗೆ ಎಂತಹ ಹೃದಯ ನೀಡಿದ್ದನೆಂದರೆ ನಾನು ಬಾಲ್ಯದಿಂದಲೇ ಇಂತಹ ವಿಷಯಗಳನ್ನು ಗಮನಿಸುತ್ತಿದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಬೇರ್ಪಡುವಾಗ ಅವರಿಗುಂಟಾಗುವ ನಿರಾಶೆಯ ಬಗ್ಗೆ ನಾನು ಅಂದಾಜು ಮಾಡಿದೆ. ನಾನು ವರ್ಷ ಗಟ್ಟಲೆ ಅವರನ್ನು ನೋಡುತ್ತಾ ಇದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಅವರಿಗೆ ತಮ್ಮ ಜೀವಿತದ ಬಗ್ಗೆ ಅಭಿರುಚಿ ಇರಲಿಲ್ಲ. ಅವರಿಗೆ ಲೋಕದಲ್ಲಿ ಯಾವ ಆಕರ್ಷಣೆಯೂ ಕಂಡು ಬರುತ್ತಿರಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಒಬ್ಬರೇ ಇರುವಾಗ ನನ್ನೊಂದಿಗೆ ಹೇಳುತ್ತಿದ್ದರು: ಹಝ್ರತ್ ಸಾಹೇಬರು ನಿಧನ ಹೊಂದಿದ ನಂತರ ನನಗೆ ನನ್ನ ಶರೀರ ಖಾಲಿಯಾದ ಹಾಗೆ ಭಾಸವಾಗುತ್ತದೆ. ಲೋಕವೇ ನನಗೆ ಬರಿದಾಗಿರುವುದಾಗಿ ಕಾಣಿಸುತ್ತದೆ– ಎಂದು.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಜಮಾಅತಿನ ಸಂಬಳ ಪಡೆಯುವ ಕಾರ್ಯಕರ್ತರಿಗೆ

ಹೀಗೆ ಉಪದೇಶಿಸಿದರು: ನೀವು ನಿಮ್ಮ ಆವಶ್ಯಕತೆಗೋಸ್ಕರ ಸಂಬಳ ವರ್ಧನೆಗಾಗಿ ಸದರ್ ಅಂಜುಮನ್ ಕಡೆಗೆ ನೋಡಬೇಡಿರಿ. ನೀವು ಅಲ್ಲಾಹನನ್ನು ಬೇಡಿಕೊಳ್ಳಿರಿ ಎಂದು ಹೇಳುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉದಾಹರಣೆ ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಹಳ ಶೀತ ಆಗುವಾಗ ಅವರು ಕಸ್ತೂರಿ ತಿನ್ನುತ್ತಿದ್ದರು. ಹಕೀಮರು ಈ ಔಷಧಿ ಶೀತಕ್ಕೆ ಸೂಚಿಸುತ್ತಾರೆ. ಒಂದು ಚಿಕ್ಕ ಶೀಷೆ ಕಸ್ತೂರಿ ತುಂಬಿಸಿ ಅವರು ಇಟ್ಟು ಕೊಳ್ಳುತ್ತಿದ್ದರು. ಎರಡೆರಡು ವರ್ಷಗಳಿಗೆ ಅದು ಸಾಕಾಗುತ್ತಿತ್ತು. ಆದರೆ ಶೀಷೆಯಲ್ಲಿ ಕಸ್ತೂರಿ ಮುಗಿದು ಹೋಗಿದೆ ಎಂಬ ಭಾವನೆ ಉಂಟಾಗಿ ಅವರು ಅದನ್ನು ನೋಡುವಾಗ ಅದರಲ್ಲಿ ಕಸ್ತೂರಿ ಇರುತ್ತಿರಲಿಲ್ಲ. ಆದರೆ ಶೀಷೆಯ ಕಡೆಗೆ ಗಮನಿಸದೆ ಇದ್ದಾಗ ಅದರಲ್ಲಿ ಅಲ್ಲಾಹನ ಅನುಗ್ರಹ ಉಂಟಾಗುತ್ತಿತ್ತು. ಆದರೆ ಅದರ ಕಡೆಗೆ ದೃಷ್ಟಿಸಿ ನೋಡುವಾಗ ಅದು ಖಾಲಿಯಾಗಿರುತ್ತಿತ್ತು. ಅಲ್ಲಾಹನು ತನ್ನ ದಾಸರಿಗೆ ಅದೃಶ್ಯವಾಗಿ ಆಹಾರ ನೀಡುತ್ತಾನೆ. ಅವನು ಅನುಗ್ರಹ ನೀಡುವ ವಿಧಾನ ಸಹ ಆಶ್ಚರ್ಯಕರವಾಗಿರುತ್ತದೆ. ಆದುದರಿಂದ ನೀವು ಅಲ್ಲಾಹನಿಂದ ಬೇಡಿಕೊಳ್ಳಿರಿ ಅವನ ಖಜಾನೆ ಖಾಲಿಯಾಗಿರುವುದಿಲ್ಲ. ನಿಮ್ಮ ಸಂಬಳ ಹೆಚ್ಚಿಸಲಿಕ್ಕಾಗಿ ಅಂಜುಮನ್ ಬಳಿ ಸಾಕಷ್ಟು ಹಣವಿಲ್ಲ. ನೀವು ಅಲ್ಲಾಹನನ್ನು ಆರಾಧಿಸುವವರಾಗಿರಿ. ಅವನು ಅದೃಶ್ಯವಾಗಿ ನಿಮಗೆ ಸಹಾಯ ಒದಗಿಸುವನು. ಅಲ್ಲಾಹನ ಮೇಲೆ ಹೆಚ್ಚು ಭರವಸೆ ಇಡಬೇಕು. ನಿಮ್ಮ ಆವಶ್ಯಕತೆಗಳನ್ನು ಈಡೇರಿಸಲು ಅವನ ಕಡೆಗೆ ಬಾಗಬೇಕು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಖಾದಿಯಾನ್ ಬಗ್ಗೆ ಇದ್ದ ಪ್ರೀತಿಯನ್ನು ಪ್ರಸ್ತಾಪಿಸುತ್ತಾ ಹೀಗೆ ಬರೆದಿದ್ದಾರೆ:

"ಯಾವ ಸ್ಥಳದೊಂದಿಗೆ ಅಲ್ಲಾಹನ ಸಂಬಂಧ ಇರುತ್ತದೆಯೋ ಅದು ಯಾವಾಗಲೂ ಅನುಗ್ರಹಿಸಲ್ಪಡುತ್ತದೆ. ಖಾದಿಯಾನ್‌ನಲ್ಲಿ ಅಲ್ಲಾಹನು ಒಬ್ಬ ಮಹಾನುಭಾವರನ್ನು ಕಳುಹಿಸಿದನು. ಅವರು ಈ ಸ್ಥಳದಲ್ಲಿ ತನ್ನ ಜೀವನವನ್ನು ಕಳೆದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜೀವಿತದ ಕೊನೆಯ ಕಾಲದಲ್ಲಿ ಲಾಹೋರಿಗೆ ಹೋಗಿದ್ದರು. ಅಲ್ಲೇ ನಿಧನ ಹೊಂದಿದರು. ಒಂದು ದಿನ ಅವರು ನನ್ನನ್ನು ಕರೆದು ಹೇಳಿದರು– ಇಲ್ಲಿನ ಬಿಸಿಲು ಹಳದಿಯಾಗಿ ಕಾಣಿಸುತ್ತದೆ. ನಾನು ಹೇಳಿದೆ– ಪ್ರತಿದಿನದ ಹಾಗೆ ಈ ದಿನದ ಬಿಸಿಲು ಸಹ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು– ಇಲ್ಲಿನ ಬಿಸಿಲು ಹಳದಿಯಾಗಿ ಕಾಣಿಸುತ್ತದೆ. ಖಾದಿಯಾನಿನ ಬಿಸಿಲು ಬಹಳ ಚೆನ್ನಾಗಿದ್ದು ಶುದ್ಧವಾಗಿದೆ ಎಂದು ಸಹ ಹೇಳಿದರು. ಖಾದಿಯಾನ್ ಬಗ್ಗೆ ಹೇಳಿದ ಈ ಮಾತು ಅವರಿಗೆ ಅದರ ಬಗ್ಗೆ ಇದ್ದ ಪ್ರೀತಿಯನ್ನು ಸೂಚಿಸುತ್ತದೆ. ಅವರು ಖಾದಿಯಾನಿನಲ್ಲೇ ದಫನು ಗೊಳಿಸಲ್ಪಟ್ಟರು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನನಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ನಿಧನ ಹೊಂದುವ ಸ್ವಲ್ಪ ಮೊದಲು ಒಂದು ಕುದುರೆಯನ್ನು ಕೊಟ್ಟರು. ಅದು ಅವರಿಗೆ ಕಾಣಿಕೆಯಾಗಿ ಲಭಿಸಿದ್ದಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ನಾವು ಮನೆ ಖರ್ಚು ಕಡಿಮೆ ಮಾಡಲು ಕುದುರೆಯನ್ನು ಮಾರಾಟ ಮಾಡಲು ನಿರ್ಧರಿಸಿದೆವು. ಒಬ್ಬ ಸ್ನೇಹಿತ ಹೇಳಿದರು– ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೊರೆತ ಪಾರಿತೋಷಕವಾದುದರಿಂದ ಅದನ್ನು ಮಾರಬೇಡಿರಿ. ನಾನು ಹೇಳಿದೆ ನಿಶ್ಚಯವಾಗಿಯೂ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪಾರಿತೋಷಕವಾಗಿದೆ. ಆದರೆ ಇದಕ್ಕಿಂತ ದೊಡ್ಡ ಪಾರಿತೋಷಕ ಹಝ್ರತ್ ಉಮ್ಮುಲ್ ಮೂಮಿನೀನ್ ಆಗಿದ್ದಾರೆ. ನಾನು ಹಝ್ರತ್ ಉಮ್ಮುಲ್ ಮೂಮಿನೀನ್‌ರಿಗೆ ಕಷ್ಟಕೊಡಲು ಬಯಸುವುದಿಲ್ಲ ಎಂದು ಹೇಳಿದೆ. ಹಾಗೆ ನಾನು ಆ ಕುದುರೆಯನ್ನು ಮಾರಿದೆ."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಅವರ ನಿಧನ ಅಕಾಲಿಕವಾದುದೆಂದು ಭಾವಿಸಲಾಗಿತ್ತು. ಆದರೆ ನನಗೆ ಅದರ ಬಗ್ಗೆ ಮೊದಲೇ ಸೂಚನೆ ದೊರಕಿತ್ತು. ಬಹಳ ದೊಡ್ಡ ಕ್ರಾಂತಿ ಆಗಲಿದೆ ಎಂದು ನನಗೆ ಭಾವನೆ ಉಂಟಾಗಿತ್ತು. ನಾನು ಒಂದು ಸ್ವಪ್ನದಲ್ಲಿ ಕಂಡೆನು. ನಾವು ಒಂದು ದೋಣಿಯಲ್ಲಿ ಬಿಹಿಶ್ತಿ ಮಕ್‌ಬರದಿಂದ ಹೊರಗೆ ಬರುತ್ತಿದ್ದೆವು. ನೀರು ಬಹಳ ವೇಗವಾಗಿ ಚಲಿಸುತ್ತಿತ್ತು. ದೋಣಿ ಸುಳಿಗೆ ಸಿಲುಕಿ ಅಪಾಯದಲ್ಲಿತ್ತು. ದೋಣಿಯಲ್ಲಿದ್ದ ಎಲ್ಲರೂ ಹೆದರಿದರು. ಜನರು ನಿರಾಶರಾದಾಗ ನೀರಿನಿಂದ ಒಂದು ಕೈ ಮೇಲೆ ಎದ್ದಿತು. ಅದರಲ್ಲಿ ಒಂದು ಬರಹವಿತ್ತು. ಇಲ್ಲಿ ಒಂದು ಪೀರ್ ಸಾಹೇಬರ ಗೋರಿ ಇದೆ ಅವರೊಂದಿಗೆ ಬೇಡಿಕೊಂಡರೆ ದೋಣಿ ಅಪಾಯದಿಂದ ಹೊರಬರುವುದು ಎಂದು. ನಾನು ಹೇಳಿದೆ– ಇದು 'ಶಿರ್ಕ್' ಆಗಿದೆ. ನಮ್ಮ ಪ್ರಾಣ ಹೋದರೂ ನಾವು ಹೀಗೆ ಮಾಡಲಾರೆವು. ಆಗ ಅಪಾಯ ಇನ್ನಷ್ಟು ಹೆಚ್ಚಾಯಿತು. ನನ್ನ ಜೊತೆಗಿದ್ದವರು, ಹಾಗೆ ಮಾಡಿದರೆ ತೊಂದರೆ ಏನು? ಎಂದು ಹೇಳುತ್ತಾ ಅವರು ನನಗೆ ತಿಳಿಯದೆ ಪೀರ್ ಸಾಹೇಬರಿಗೆ ಒಂದು ಪತ್ರ ಬರೆದು ನೀರಿನಲ್ಲಿ ಹಾಕಿದರು. ನಾನು ಅದನ್ನು ನೋಡಿದ ಕೂಡಲೆ ನೀರಿಗೆ ಹಾರಿದೆ. ಆ ಪತ್ರ ತೆಗೆದುಕೊಂಡೆ. ಅನಂತರ ಆ ಅಪಾಯ ದೂರ ಸರಿಯಿತು. ದೋಣಿ ನಿರಾತಂಕವಾಗಿ ಚಲಿಸತೊಡಗಿತ್ತು. ಯಾವ ಅಪಾಯವೂ ಬಾಕಿಯಾಗಿ ಉಳಿಯಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಅಲ್ಲಾಹನು ನನ್ನ ಹೃದಯವನ್ನು ಬಹಳ ಬಲಪಡಿಸಿದನು. ನಮ್ಮ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಹಾಕಲಾಗಿದೆ ಎಂದು ನಾನು ಕೂಡಲೆ ಗ್ರಹಿಸಿದೆ. ನಾನು ಆಗಲೆ ಪ್ರತಿಜ್ಞೆ ಮಾಡಿದೆ. ಓ ನನ್ನ ಪ್ರಭು, ನಾನು ನಿನ್ನ ಮಸೀಹ್ ಮೌಊದರ ಮೃತಶರೀರದ ಸಮೀಪ ನಿಂತು ಪ್ರತಿಜ್ಞೆ ಮಾಡುತ್ತೇನೆ. ಈ ಕೆಲಸ ಮುಂದುವರಿಸಲು ಲೋಕದಲ್ಲಿ ಒಬ್ಬನೇ ಒಬ್ಬನು ಇರದಿದ್ದರೂ ನಾನು ಈ ಕೆಲಸ ಖಂಡಿತ ಮುಂದುವರಿಸುವೆನು. ಆಗ ನನ್ನಲ್ಲಿ ಎಂತಹ ಶಕ್ತಿ ಇತ್ತೆಂದರೆ ಅದನ್ನು ನಾನು ವರ್ಣಿಸಲಾರೆ. ನನ್ನ ಈ ಪ್ರತಿಜ್ಞೆ ನನ್ನನ್ನು ಇಂದಿನ ತನಕ

ಬಲವಾಗಿ ನನ್ನ ನಿರ್ಧಾರದಲ್ಲಿ ಸ್ಥಿರವಾಗಿರಿಸಿತು. ವಿರೋಧದ ನೂರಾರು ತೂಫಾನುಗಳು ನನ್ನ ವಿರುದ್ಧ ಬೀಸಿದುವು. ಆದರೆ ಅವುಗಳೆಲ್ಲಾ ಈ ಬೃಹತ್ ಬಂಡೆಗಲ್ಲಿಗೆ ಡಿಕ್ಕಿ ಹೊಡೆದು ತಮ್ಮದೇ ತಲೆಗಳನ್ನು ಒಡೆದವು.''

''ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯೂ ದೀನ್‌ಗೆ ಸಂಬಂಧಪಟ್ಟ ಕೆಲಸಗಳನ್ನು ನಾನೇ ಮಾಡಬೇಕಾಗಿದೆ ಎಂಬ ಪ್ರತಿಜ್ಞೆಯನ್ನು ಮಾಡಬೇಕು. ಹಾಗೆ ಮಾಡಿದ ನಂತರ ಅವರಲ್ಲಿ ಒಂದು ಪ್ರಜ್ಞೆ ಉಂಟಾಗುವುದು. ಪ್ರತಿಯೊಂದು ಕೆಲಸವೂ ಅವರಿಗೆ ಸುಲಭವಾಗುವುದು. ಪ್ರತಿಯೊಂದು ಕಷ್ಟ(ಉಸ್‌ರ್) ಅವರಿಗೆ ಸುಲಭ(ಯುಸ್‌ರ್) ಆಗುವುದು. ಪ್ರತಿಯೊಂದು ಕೊರತೆ ಅವರಿಂದ ನೀಗಿ ಸಮೃದ್ಧಿ ಉಂಟಾಗುವುದು. ನಿಶ್ಚಯವಾಗಿಯೂ ಅವರಿಗೆ ಕೆಲವು ಕಷ್ಟಗಳನ್ನೂ ನೋವನ್ನೂ ಅನುಭವಿಸಬೇಕಾಗಬಹುದು ಆದರೆ ಅವರು ಅದರಲ್ಲೂ ಸುಖವನ್ನು ಅನುಭವಿಸುವರು.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳುತ್ತಾನೆ. ಧರ್ಮವನ್ನು ಪರಿಪೂರ್ಣಗೊಳಿಸಲು ನಿನ್ನನ್ನು ಮಾತ್ರ ನಾನು ಸಂಬೋಧಿಸುತ್ತಿದ್ದೇನೆ. ನಿನ್ನ ಸಂಗಡಿಗರು ಅದರಲ್ಲಿ ಭಾಗವಹಿಸಿದರೂ ಭಾಗವಹಿಸದೆ ಇದ್ದರೂ ನಿನ್ನ ಮೂಲಕ ನಾನು ಈ ಕೆಲಸ ಮಾಡಿಸುವೆನು. ಇದೇ ಕಾರಣದಿಂದ ಅವರು ರಾತ್ರಿ–ಹಗಲು ಇದೇ ಕೆಲಸದಲ್ಲಿ ಮಗ್ನರಾಗಿದ್ದರು. ಅವರ ಪ್ರತಿಯೊಂದು ಚಲನೆ, ಅವರ ಮೌನ, ಅವರ ಮಾತು, ಅವರ ಕೆಲಸ ಎಲ್ಲವೂ ದೇವನ ಧರ್ಮವನ್ನು ಲೋಕದಲ್ಲಿ ಸ್ಥಾಪಿಸಲಿಕ್ಕಾಗಿತ್ತು. ಇದೇ ನನ್ನ ಕೆಲಸ ಎಂದು ಅವರು ತಿಳಿದುಕೊಂಡಿದ್ದರು. ಇದು ಬೇರೆ ಯಾರ ಕೆಲಸವೂ ಅಲ್ಲ ಎಂದು ಅವರು ಮನವರಿಕೆ ಮಾಡಿದ್ದರು. ಇದೇ ನಡೆವಳಿಕೆಯನ್ನು ನಾವು ಸಹ ನಮ್ಮದನ್ನಾಗಿ ಮಾಡಿಕೊಳ್ಳಬೇಕಾಗಿದೆ.

ಮುನ್ನೂರು ಕೋಟಿ ಜನರಿದ್ದಾರೆ. ಅವರೆಲ್ಲರಿಗೂ ಏಕದೇವನ ಸಂದೇಶ ತಲಪಿಸಿ, ಅವರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುತ್ತಲೂ ಜಮಾಯಿಸುವುದು ಇಂದು ಅಹ್ಮದಿಯಾ ಜಮಾಅತಿಗೆ ಕಡ್ಡಾಯವಾದ ಕೆಲಸವಾಗಿದೆ. ನಮ್ಮ ಮುಂದೆ ಇರುವ ಈ ಕೆಲಸ ಬಹಳ ದೊಡ್ಡದಾಗಿದೆ. ಬಲಹೀನರಾದ ನಮ್ಮ ಹೆಗಲ ಮೇಲೆ ಬಹಳ ದೊಡ್ಡ ಭಾರವನ್ನು ಹಾಕಲಾಗಿದೆ. ಅಲ್ಲಾಹನು ಅದ್ಭುತಕರವಾಗಿ ನಮಗೆ ನೆರವು ನೀಡದೆ ಹೊರತು ನಮಗೆ ಇದರಲ್ಲಿ ಜಯ ಲಭಿಸಲು ಸಾಧ್ಯವಿಲ್ಲ. ನಾವು ಅಲ್ಲಾಹನ ಬಲಹೀನ ದಾಸರಾಗಿದ್ದೇವೆ. ಅಲ್ಲಾಹನ ಅನುಗ್ರಹವಿಲ್ಲದೆ ನಮ್ಮ ಯಾವ ಕೆಲಸವೂ ಯಶಸ್ವಿಯಾಗದು. ಆದುದರಿಂದ ನಾವು ಅಲ್ಲಾಹನ ಅನುಗ್ರಹ ಗಳಿಸಲು ಪರಿಪೂರ್ಣವಾಗಿ ಪ್ರಯತ್ನಿಸಬೇಕಾಗಿದೆ.'' ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮಾಡಿದ ಪ್ರತಿಜ್ಞೆ ನಮ್ಮೆಲ್ಲರ ಪ್ರತಿಜ್ಞೆಯಾಗಬೇಕು. ಅದರ ಮೂಲಕವೇ ಜಮಾಅತ್ ಅಭಿವೃದ್ಧಿ ಗಳಿಸುವುದು. ಅದರ ಮೂಲಕವೇ ನಾವು ಜಮಾಅತಿನ ಕಾರ್ಯನಿರತ ಭಾಗವಾಗಬಲ್ಲೆವು. ಇದು ಅಲ್ಲಾಹನ ಕೆಲಸವಾಗಿದೆ. ಇದು ಅಲ್ಲಾಹನ ಸಹಾಯದಿಂದಲೇ ಈಡೇರಬೇಕಾಗಿದೆ. ನಮ್ಮ ಪೈಕಿ ಪ್ರತಿಯೊಬ್ಬನೂ ನಾವು ಶಿರ್ಕ್‌ನಿಂದ ದೂರ ಸರಿಯುವೆವು ಎಂದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಈಡೇರಿಸಲು ಧಾರಾಳ ಪ್ರಯತ್ನ ಮಾಡುವೆವು ಎಂದೂ ಪ್ರತಿಜ್ಞೆ ಮಾಡಬೇಕು. ನಾವು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ಹಾರಿಸುವೆವು ಎಂದು ಅಲ್ಲಾಹನೊಂದಿಗೆ ವಾಗ್ದಾನ ಮಾಡಿದವರಾಗಿದ್ದೇವೆ. ಇನ್‌ಶಾಅಲ್ಲಾಹ್– ಅದನ್ನು ನಾವು ಈಡೇರಿಸುವೆವು. ಅಲ್ಲಾಹನು ನಮಗೆ ಅದಕ್ಕೋಸ್ಕರ ಭಾಗ್ಯನೀಡಲಿ – ಆಮೀನ್.

———————————*****———————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 22-05-2015.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon